<u>ಅಸಲು ದಾವಾಃ-</u> 340/2014 ಪಿ.ಡಬ್ಲ್ಯೂಃ- 1

ದಿನಾಂಕಃ 17.06.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- 9 ರಿಂದ 15 ನೇ ಪ್ರತಿವಾದಿಗಳ ಪರ ಶ್ರೀ.ಟಿಇಎಸ್ ವಕೀಲರಿಂದ</u>

ಪ್ರತಿವಾದಿ 9 ರಿಂದ 15 ರವರನ್ನು ದಾವಾ ವಾದಪತ್ರದ ಜಿನೋಲಾಜಿಕಲ್ ಟ್ರಿ ನಲ್ಲಿ ತೋರಿಸಿಲ್ಲ ಎಂದರೆ ಸರಿ. ನಾನು ಈ ದಾವೆಯಲ್ಲಿ ಯಾವುದೇ ವಂಶವೃಕ್ಷ ಹಾಕಿಲ್ಲ ಎಂದರೆ ಸಾಕ್ಷಿಯು ಮಾಯಪ್ಪ ರವರ ವಂಶವೃಕ್ಷವನ್ನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮಾಯಪ್ಪರವರ ವಂಶವೃಕ್ಷದಲ್ಲಿ ಪ್ರತಿವಾದಿ 9 ರಿಂದ 11 ರವರನ್ನು ನಮೂದಿಸಿದ್ದೀರಾ ಎಂದರೆ ಇಲ್ಲ. ಪ್ರತಿವಾದಿ 9 ರಿಂದ 15 ರವರ ಆಸ್ತಿಗಳ ಮೇಲೆ ನನಗೆ ಹಕ್ಕು ಇಲ್ಲ ಎಂದರೆ ಸರಿ. ಓಎಸ್ 105/2009 ರ ದಾವೆಯ ಮೇಲೆ ನಾವು ಅಪೀಲು ಸಲ್ಲಿಸಿಲ್ಲ ಎಂದರೆ ಸರಿ. ಓಎಸ್ 105/2009 ರ ದಾವೆಯಲ್ಲಿ ನನ್ನ ತಾಯಿಯು 4 ನೇ ಪ್ರತಿವಾದಿ ಎಂದರೆ ಗೊತ್ತಿಲ್ಲ. ಪ್ರತಿವಾದಿ 9 ರಿಂದ 18 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆಯು ಕಾನೂನು ಪ್ರಕಾರ ವಜಾ ಆಗುವಂತದ್ದು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಹೊನ್ನಾಳಿ